ವಿಜಯ ಕರ್ನಾಟಕ

ಗುರುವಾರ, 2 ಏಪ್ರಿಲ್ 2026,

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಮೊದಲ ಬಾರಿ ಮೃತ ದಾನಿಯ ಯಕೃತ್ತು ಕಸಿ ಶಸ್ತ್ರಚಿಕಿತ್ಸೆ




ಮಣಿಪಾಲದ ಬೋಧನಾ ಆಸ್ಪತ್ರೆಗಳ ಸಿಒಒ ಡಾ.ಸುಧಾಕರ್ ಕಂಟಿಪುಡಿ ಮಾಹಿತಿ ನೀಡಿದರು.

■ **ವಿಕ ಸುದ್ದಿಲೋಕ** ಮಣಿಪಾಲ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಮೊದಲ ಬಾರಿ ಮೃತ ದಾನಿಯ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಕುಂದಾಪುರದ 56 ವರ್ಷದ, ಸಿರೋಸಿಸ್ ರೋಗಿಯೊಬ್ಬರಿಗೆ ಎರಡು ತಿಂಗಳ ಹಿಂದೆ ಯಶಸ್ವಿಯಾಗಿ ಮಾಡಿದ್ದು ರೋಗಿ ಸಂಪೂರ್ಣ ಗುಣಮುಖರಾಗಿದ್ದಾರೆ ಎಂದು ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಟಿಪುಡಿ ತಿಳಿಸಿದ್ದಾರೆ.

ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಸಿ ಶಸ್ತ್ರಚಿಕಿತ್ಸೆ ಬಳಿಕ ಮೂರು ತಿಂಗಳ ನಿಗಾ ಅಗತ್ಯವಿದ್ದು. ರೋಗಿ ತಾವು ಎದುರಿಸಿದ ಸವಾಲುಗಳೆಲ್ಲವನ್ನೂ ಮೆಟ್ಟಿ ನಿಂತು ಧೈರ್ಯದಿಂದ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ, ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಮೂಲಕ ಚೇತರಿಕೆ ಕಂಡಿದ್ದಾರೆ ಎಂದರು.

ರೋಗಿಯ ಜೀವ ಉಳಿಸುವ ನಿಟ್ಟಿನಲ್ಲಿ ಮೃತ ದಾನಿಯ ಕುಟುಂಬದ ಮನವೊಲಿಸಿ, ಅಂಗಾಂಗ ಹಂಚಿಕೆ ಪ್ರೊಟೋಕಾಲ್ ಅನುಸರಿಸಿ, ಯಕೃತ್ ಕಸಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ವೈದ್ಯರು ತಂಡವಾಗಿ ಮೃತ ದಾನಿ ಹಾಗೂ ರೋಗಿಯ ನಡುವೆ ಕಸಿ ಯಶಸ್ವಿ ಶಸ್ತ್ರಚಿಕಿತ್ಸೆ ನಿಟ್ಟಿನಲ್ಲಿ ಸಮನ್ವಯದಿಂದ ಕಾರ್ಯನಿರ್ವಹಿಸಿದ್ದಾರೆ.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ 8ರಿಂದ 10ಮಂದಿ ಅಂಗಾಂಗ ವೈಫಲ್ಯಗಳ ಹಿನ್ನೆಲೆಯಲ್ಲಿ ದಾನಿಗಳಿಗಾಗಿ ಕಾಯುತ್ತಿದ್ದು ಅಂಗಾಂಗ ದಾನ ವಿರಳವಾಗಿದೆ. ದೇಶದಲ್ಲಿ ವರ್ಷಕ್ಕೆ 25,000 ಜನರಿಗೆ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ಅಗತ್ಯವಿದ್ದರೂ ಕೇವಲ 1,000 ಜನರಿಷ್ಟೇ ಅಂಗಾಂಗ ಸಿಗುತ್ತಿದೆ.

ಮದ್ಯಪಾನ, ಫ್ಯಾಟಿ ಲಿವರ್ ರೋಗ ಯಕೃತ್ತು ಹಾನಿಗೆ ಮುಖ್ಯ ಕಾರಣವಾಗಿದೆ. ಲಿವರಿನ ಶೇ. 70 ಭಾಗ ದಾನ ಮಾಡಿದರೂ ಎರಡು ತಿಂಗಳಲ್ಲಿ ಪೂರ್ಣ ಬೆಳವಣಿಗೆ ಹೊಂದುತ್ತದೆ. ಅಂಗಾಂಗ ದಾನ ಜಾಗೃತಿ ಸಮಾಜದಲ್ಲಿ ಹೆಚ್ಚಬೇಕು. ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗಳ ಸಹಯೋಗದಲ್ಲಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಲಿವರ್ ಕಸಿ ರೋಗಿಗಳಿಗೆ ಸಮಯ, ಹಣ, ಆರೈಕೆ ನಿಟ್ಟಿನಲ್ಲಿ ಅನುಕೂಲಕರವಾಗಿದೆ.

ಕ್ಲಿನಿಕಲ್ ಶ್ರೇಷ್ಠತೆ ಜತೆಗೆ ಯಕೃತ್ತು ಕಸಿ ಹೆಚ್ಚು ಕೈಗೆಟಕುವಂತೆ ಹಾಗೂ ಅಗತ್ಯವುಳ್ಳವರಿಗೆ ತಲುಪುವಂತೆ ಮಾಡುವುದು ಗುರಿಯಾಗಿದೆ. ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯು ಪ್ರಮುಖ ಟಿಪಿಎಗಳು ಹಾಗೂ ಆರೋಗ್ಯ ವಿಮಾ ಪೂರೈಕೆದಾರರ ಜತೆ ಒಪ್ಪಂದ ಮಾಡಿಕೊಂಡಿದೆ.

ಅರ್ಹರ ರೋಗಿಗಳು ಅನ್ವಯವಾಗುವ ಮರ್ಗಸೂಚಿಗಳಿಗೆ ಅನುಗುಣವಾಗಿ ಸರಕಾರಿ ಆರೋಗ್ಯ ಯೋಜನೆಯಡಿ ಪ್ರಯೋಜನ ಪಡೆಯಬಹುದು ಎಂದರು.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಕಸಿ ಶಸ್ತ್ರಚಿಕಿತ್ಸೆ ಸಲಹೆಗಾರರಾದ ಡಾ.ದೀಪ್ತಿ ರಾಮಚಂದ್ರ, ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಗ್ಯಾಸ್ಟ್ರೋ ಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ, ಲಿವರ್ ಮತ್ತು ಪ್ರಾಂಕ್ರಿಯಾಟಿಕ್ ಕಸಿ ಶಸ್ತ್ರ ಚಿಕಿತ್ಸೆ ವಿಭಾಗದ ಪ್ರಮುಖ ಸಲಹೆಗಾರ ಡಾ.ಜಯಂತ್ ರೆಡ್ಡಿ, ಗ್ಯಾಸ್ಟ್ರೋ ಎಂಟರಾಲಜಿ ಸರ್ಜರಿ ವಿಭಾಗದ ಸಹ ಪ್ರಾಧ್ಯಾಪಕ ಡಾ.ಭರತ್ ಭಟ್ ಉಪಸ್ಥಿತರಿದ್ದರು.

2-4-2026
UDAYAVANI - MANIPAL

## ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ

# ಜಿಲ್ಲೆಯ ಮೊದಲ ಯಕೃತ್ತು ಕಸಿ ಶಸ್ತ್ರಚಿಕಿತ್ಸೆ

**ಕೋವಿಡ್ ಕಾಲದಿಂದಲೂ ಆರೋಗ್ಯದಲ್ಲಿ ಏರುಪೇರಾಗಿದ್ದು ಮಣಿಪಾಲದಲ್ಲಿ ವೈದ್ಯರನ್ನು ಸಂಪರ್ಕಿಸಿದಾಗ ಲಿವರ್ ಸಮಸ್ಯೆ ಇರುವುದು ಕಂಡು ಬಂದಿದೆ. ಪ್ರಸ್ತುತ ನಾನು ಚೇತರಿಸಿಕೊಂಡಿದ್ದು, ಅದಕ್ಕೆ ಇಲ್ಲಿನ ವೈದ್ಯರೇ ಕಾರಣ. ಶಸ್ತ್ರಚಿಕಿತ್ಸೆ ಪೂರ್ಣಗೊಂಡ 2 ವಾರದಲ್ಲಿ ನಡೆಯಲು ಆರಂಭಿಸಿದ್ದೇನೆ ಎಂದು ಲಿವರ್ ಕಸಿಗೆ ಒಳಗಾದ ವ್ಯಕ್ತಿ ಅನಿಸಿಕೆ ಹಂಚಿಕೊಂಡರು.**

ಮಣಿಪಾಲ, ಎ. 1: ಮಾಹೆ ವಿವಿಯ ಕಸ್ತೂರ್ಬಾ ಆಸ್ಪತ್ರೆ (ಕೆಎಂಸಿ)ಯಲ್ಲಿ ಜಿಲ್ಲೆಯ ಮೊದಲ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ. ಮೃತ ದಾನಿಯ ಯಕೃತ್ತನ್ನು ಲಿವರ್ ಸಮಸ್ಯೆ ಎದುರಿಸುತ್ತಿದ್ದ ಕುಂದಾಪುರ ಭಾಗದ ರೋಗಿಯೊಬ್ಬರಿಗೆ ಕಸಿ ಮಾಡಲಾಗಿದೆ. ಈ ಮೂಲಕ ಜಿಲ್ಲೆಯಲ್ಲಿ ಸುಧಾರಿತ ಲಿವರ್ ಕಸಿ ಆರೈಕೆ ಲಭ್ಯವಾಗುವಂತೆ ಮಾಡುವಲ್ಲಿ ಕಸ್ತೂರ್ಬಾ ಆಸ್ಪತ್ರೆ ಮಹತ್ವದ ಮೈಲುಗಲ್ಲು ಸಾಧಿಸಿದೆ.

ದೀರ್ಘಕಾಲದ ಯಕೃತ್ (ಲಿವರ್) ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಯನ್ನು ಮೃತ ದಾನಿ ಕಸಿ ಕಾರ್ಯಕ್ರಮದಡಿಯಲ್ಲಿ ಬಹು ಆಯಾಮ ಮೌಲ್ಯಮಾಪನಕ್ಕೆ ಒಳಪಡಿಸಲಾಯಿತು. ಎಚ್ಚರಿಕೆಯ ಯೋಜನೆ ಮತ್ತು ಅಂಗಾಂಗ ಹಂಚಿಕೆ ಪ್ರೋಟೋಕಾಲ್‌ಗಳನ್ನು ಅನುಸರಿಸಿ, ಅವರು ಸಂಕೀರ್ಣವಾದ ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದರು. ಬಳಿಕ ಅವರ ಚೇತರಿಕೆ ಸ್ಥಿರವಾಗಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ಮಾಹೆ ಬೋಧನ ಆಸ್ಪತ್ರೆಗಳ ಸಿಒಒ ಡಾ। ಸುಧಾಕರ್ ಕಂಟಿಪುಡಿ ಬುಧವಾರ ಆಸ್ಪತ್ರೆಯ ಡಾ। ರಾಮದಾಸ್ ಪೈ ಬ್ಲಾಕ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ। ಶಿರನ್ ಶೆಟ್ಟಿ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ರೋಗಿಯನ್ನು ಬಲ್ಲವರಾಗಿದ್ದೇವೆ. ಅವರ ಯಕೃತ್ತಿನ ಕಾಯಿಲೆಯು ಒಂದು ಹಂತಕ್ಕೆ ಮುಂದುವರಿದಿದ್ದು, ಯಕೃತ್ ಕಸಿ ಮಾಡುವಿಕೆ ಮಾತ್ರ ಕೊನೆಯ ಆಯ್ಕೆಯಾಗಿತ್ತು. ಬಳಿಕ ರೋಗಿಯನ್ನು ಎಚ್‌ಪಿಬಿ ಆ್ಯಂಡ್ ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಟ್ರಾನ್ಸ್‌ಪ್ಲಾಂಟ್ ಸರ್ಜರಿಯ ಪ್ರಮುಖ ಸಲಹೆಗಾರ ಡಾ। ಜಯಂತ್ ರೆಡ್ಡಿ ನೇತೃತ್ವದ ಕಸಿ ತಂಡಕ್ಕೆ ಶಿಫಾರಸು ಮಾಡಲಾಯಿತು. ಅನಂತರ ಈ ಶಸ್ತ್ರಚಿಕಿತ್ಸೆಯು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಐಸಿಯು ತಂಡದೊಂದಿಗೆ ಡಾ। ಭರತ್ ಕುಮಾರ್ ಭಟ್ ಮತ್ತು ಅವರ ತಂಡ ಅಗತ್ಯ ಸಹಕಾರ ನೀಡಿದೆ ಎಂದರು.

ಡಾ। ಜಯಂತ್ ರೆಡ್ಡಿ ಮಾತನಾಡಿ, ಈ ಪ್ರಕರಣವು ಹೆಚ್ಚು ಸಂಕೀರ್ಣವಾಗಿತ್ತು ಮತ್ತು ವಿವಿಧ ತಂಡಗಳ ಬೆಂಬಲದೊಂದಿಗೆ ಈ ಸಾಧನೆ ಸಾಧ್ಯವಾಗಿದೆ. ಭಾರತದಲ್ಲಿ ಮೆದುಳು ನಿಷ್ಕ್ರಿಯವಾದ ರೋಗಿಯ ಅಂಗಾಂಗ ಕಸಿಗೆ ಮಾತ್ರ ಅವಕಾಶವಿದೆ. ಜೀವಂತ ವ್ಯಕ್ತಿಯ ಲಿವರ್ ಅನ್ನು ಅವರ ಹತ್ತಿರದ ಸಂಬಂಧಿಗೆ ನೀಡಬಹುದಾಗಿದೆ. ಶೇ. 70ರಷ್ಟು ಲಿವರ್ ಕಸಿ ಮಾಡಿದರೆ ಅದು ಮುಂದಿನ ಕೆಲವೇ ವಾರದಲ್ಲಿ ಬೆಳೆಯಲಿದೆ ಎಂದರು.

ಎಚ್‌ಪಿಬಿ ಆ್ಯಂಡ್ ಲಿವರ್ ಪ್ರಾಂಕ್ರಿಯಾಟಿಕ್ ಕಸಿ ಶಸ್ತ್ರಚಿಕಿತ್ಸೆ ಸಲಹೆಗಾರರಾದ ಡಾ। ದೀಪ್ತಿ ರಾಮಚಂದ್ರ, ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ್ ಶೆಟ್ಟಿ, ಗ್ಯಾಸ್ಟ್ರೋಎಂಟರಾಲಜಿ ಸರ್ಜರಿ ವಿಭಾಗದ ಸಹ ಪ್ರಾಧ್ಯಾಪಕ ಡಾ। ಭರತ್ ಭಟ್ ಸುದ್ದಿಗೋಷ್ಠಿಯಲ್ಲಿದ್ದರು.

ಗುರುವಾರ • ಏಪ್ರಿಲ್ 2, 2026

ಪ್ರಜಾವಾಣಿ

# ಕೆಎಂಸಿ: ಯಕೃತ್ತು ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ

ಉಡುಪಿ: ಮಣಿಪಾಲದ ಕೆಎಂಸಿಯ ಬೋಧನಾ ಆಸ್ಪತ್ರೆ, ಕಸ್ತೂರ್ಬಾ ಆಸ್ಪತ್ರೆಯಲ್ಲಿ ಮೊದಲ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದಿದೆ ಎಂದು ಮಣಿಪಾಲ ಮಾಹೆಯ ಬೋಧನಾ ಆಸ್ಪತ್ರೆಗಳ ಸಿಒಒ ಡಾ.ಸುಧಾಕರ್ ಕಂಟಿಪುಡಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ದೀರ್ಘಕಾಲದ ಯಕೃತ್ ಕಾಯಿಲೆ, ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಗೆ, ಮೃತ ದಾನಿ ಕಸಿ ಕಾರ್ಯಕ್ರಮದಡಿಯಲ್ಲಿ ಯಕೃತ್ತು ಕಸಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ವಿವರಿಸಿದರು.

ಕಸ್ತೂರ್ಬಾ ಆಸ್ಪತ್ರೆಯ ಗ್ಯಾಸ್ಟ್ರೋ-ಎಂಟರಾಲಜಿ, ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ.ಶಿರನ್ ಶೆಟ್ಟಿ ಮತ್ತು ತಂಡ ಆರಂಭಿಕ ಮೌಲ್ಯಮಾಪನ ನಡೆಸಿದಾಗ, ಯಕೃತ್ ಕಸಿ ನಡೆಸುವುದರಿಂದ ಮಾತ್ರ ರೋಗಿ ಬದುಕುಳಿಯಲು ಸಾಧ್ಯ ಎಂಬುದು ಸ್ಪಷ್ಟವಾಯಿತು. ಬಳಿಕ ರೋಗಿಯನ್ನು ಎಚ್‌ಪಿಬಿ ಮತ್ತು ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಟ್ರಾನ್ಸ್‌ಪ್ಲಾಂಟ್ ಸರ್ಜರಿಯ ಪ್ರಮುಖ ಸಲಹೆಗಾರ ಡಾ. ಜಯಂತ್ ರೆಡ್ಡಿ ನೇತೃತ್ವದ ಕಸಿ ತಂಡಕ್ಕೆ ಶಿಫಾರಸು ಮಾಡಲಾಯಿತು ಎಂದು ಮಾಹಿತಿ ನೀಡಿದರು.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಐಸಿಯು ತಂಡದೊಂದಿಗೆ ಡಾ.ಭರತ್ ಕುಮಾರ್ ಭಟ್ ಮತ್ತು ತಂಡ ಕಸಿ ಶಸ್ತ್ರ-ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಡಾ.ದೀಪ್ತಿ ರಾಮಚಂದ್ರ, ಡಾ.ಅವಿನಾಶ್ ಶೆಟ್ಟಿ, ಯಕೃತ್ತು ಕಸಿಗೆ ಒಳಗಾದ ರೋಗಿ, ಡಾ.ಶಿರನ್ ಶೆಟ್ಟಿ, ಡಾ.ಜಯಂತ್ ರೆಡ್ಡಿ, ಡಾ.ಭರತ್ ಭಟ್ ಉಪಸ್ಥಿತರಿದ್ದರು.

ಕನ್ನಡಪ್ರಭ

ಗುರುವಾರ 2.04.2026

ಶಸ್ತ್ರಚಿಕಿತ್ಸೆ | ಉಡುಪಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಮೃತ ದಾನಿಯ ಲಿವರ್ ಇನ್ನೊಬ್ಬ ರೋಗಿಗೆ ಕಸಿ

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ: ಮೊದಲ ಯಕೃತ್ ಕಸಿ ಯಶಸ್ವಿ

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿಯ ಯಕೃತ್ತು (ಲಿವರ್)ನ್ನು ಇನ್ನೊಬ್ಬ ರೋಗಿಗೆ ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ, ಇದು ಕರಾವಳಿಯಲ್ಲಿ ಸುಧಾರಿತ ಕಸಿ ಆರೈಕೆ ಲಭ್ಯವಾಗುವಂತೆ ಮಾಡುವಲ್ಲಿ ಐತಿಹಾಸಿಕ ಮೈಲಿಗಲ್ಲು ಸಾಧನೆಯಾಗಿದೆ ಎಂದು ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ ತಿಳಿಸಿದ್ದಾರೆ.

ಯಕೃತ್ತು ಕಸಿ ಮಾಡಿಕೊಡ ಕುಂದಾಪುರ ರೋಗಿ ಅನುಭವ ವ್ಯಕ್ತಪಡಿಸುವ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 42 ವರ್ಷ ವಯಸ್ಸಿನ ಮೃತರೊಬ್ಬರ ಯಕೃತನ್ನು ಅವರ ಮನೆಯವರು ತಮ್ಮ ದುಃಖದಲ್ಲಿಯೂ ದಾನ ಮಾಡುವ ಮೂಲಕ ಮತ್ತೊಬ್ಬ ರೋಗಿಗೆ ಬದುಕಲು ಹೊಸ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ದೀರ್ಘಕಾಲದ ಯಕೃತ್ ಸಿರೋಸಿಸ್ ಕಾಯಿಲೆಯಿಂದದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಗೆ ಯಕೃತ್ತಿನ ಕಸಿ ಮಾಡುವುದೊಂದೇ ಪರಿಹಾರವಾಗಿತ್ತು. ಅದರಂತೆ ಮೃತ ವ್ಯಕ್ತಿಯಿಂದ ಪಡೆದ ಯಕೃತನ್ನು 2 ತಿಂಗಳ ಹಿಂದೆ ಅವರಿಗೆ ಕಸಿ ಮಾಡಲಾಯಿತು. ಅವರ ಚೇತರಿಕೆ ಸ್ಥಿರವಾಗಿ ಮುಂದುವರಿದು, ಅವರನ್ನು ಸ್ಥಿರ ಸ್ಥಿತಿಯಲ್ಲಿ ಬಿಡುಗಡೆ ಮಾಡಲಾಯಿತು. ಇದರೊಂದಿಗೆ, ಮಣಿಪಾಲದಲ್ಲಿ ಕರಾವಳಿ ಕರ್ನಾಟಕದ ರೋಗಿಗಳಿಗೆ ಸುಧಾರಿತ ಕಸಿ ಆರೈಕೆಯು ಲಭ್ಯವಾಗಲಿದೆ ಎಂದರು.




ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ ಮಾತನಾಡುತ್ತಿರುವುದು.

ಮಾಹೆ ಮಣಿಪಾಲ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಠಿಪುಡಿ, ಬೆಂಗಳೂರಿನ ಮಣಿಪಾಲ ಆಸ್ಪತ್ರೆಯ ಎಚ್‌ಪಿಬಿ - ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಟ್ರಾನ್ಸ್‌ಪ್ಲಾಂಟ್ ಸರ್ಜರಿಯ ಪ್ರಮುಖ ಸಲಹೆಗಾರ ಡಾ. ಜಯಂತ್ ರೆಡ್ಡಿ ನೇತೃತ್ವದಲ್ಲಿ ಕಸ್ತೂರ್ಬಾ ಆಸ್ಪತ್ರೆಯ ಡಾ. ಭರತ್ ಕುಮಾರ್ ಭಟ್ ಮತ್ತು ಅವರ ಬಹುಶಿಸ್ತೀಯ ತಂಡವು ವಿಶ್ವದರ್ಜೆಯ ಈ ಶಸ್ತ್ರಚಿಕಿತ್ಸೆ ಸಂಘಟಿತವಾಗಿ ಯಶಸ್ವಿಗೊಳಿಸಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಕಸಿ ಶಸ್ತ್ರಚಿಕಿತ್ಸೆ ಸಲಹೆಗಾರ ಡಾ. ದೀಪ್ತಿ ರಾಮಚಂದ್ರ, ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ, ಗ್ಯಾಸ್ಟ್ರೋಎಂಟರಾಲಜಿ ಸರ್ಜರಿ ವಿಭಾಗದ ಪ್ರಾಧ್ಯಾಪಕ ಡಾ. ಭರತ್ ಭಟ್ ಇದ್ದರು.

**ಕರಾವಳಿ ಕರ್ನಾಟಕದ ರೋಗಿಗಳಿಗೆ ಹತ್ತಿರದಲ್ಲಿ ಸುಧಾರಿತ ಲಿವರ್ ಕಸಿ ಆರೈಕೆ ನಾವು ಈಗ ನೀಡಲು ಸಮರ್ಥರಾಗಿದ್ದೇವೆ. ಆದರೆ ಮಣಿಪಾಲ ಆಸ್ಪತ್ರೆಯಲ್ಲಿ ಇನ್ನೂ 8 – 10 ಮಂದಿ ರೋಗಿಗಳು ಯಕೃತ್ತಿನ ಕಸಿಗಾಗಿ ಕಾಯುತಿದ್ದಾರೆ, ಆದ್ದರಿಂದ ಮೃತ ವ್ಯಕ್ತಿಗಳ ಯಕೃತ್ತಿನ ದಾನಕ್ಕೆ ಜನರು ಮುಂದೆ ಬರಬೇಕು ಮತ್ತು ಜೀವದಾನಕ್ಕೆ ನೆರವಾಗಬೇಕು.**

• **ಡಾ. ಜಯಂತ್ ರೆಡ್ಡಿ** ಬೆಂಗಳೂರಿನ, ಮಣಿಪಾಲ ಆಸ್ಪತ್ರೆಯ ಎಚ್‌ಪಿಬಿ - ಲಿವರ್ ಮತ್ತು ಪ್ಯಾಂಕ್ರಿಯಾಟಿಕ್

ಸಂಯುಕ್ತ ಕರ್ನಾಟಕ

# ಕೆಎಂಸಿ ಆಸ್ಪತ್ರೆಯಲ್ಲಿ ಯಶಸ್ವಿ ಯಕೃತ್ ಕಸಿ ಶಸ್ತ್ರಚಿಕಿತ್ಸೆ

**ಸಂ.ಕ.ಸಮಾಚಾರ, ಉಡುಪಿ**

ಸುಮಾರು ನಾಲ್ಕು ವರ್ಷಗಳಿಂದ ಯಕೃತ್ ಸಮಸ್ಯೆಯಿಂದ ಬಳಲುತ್ತಿದ್ದ ಕುಂದಾಪುರದ ವ್ಯಕ್ತಿಯೋರ್ವರಿಗೆ ಮೃತ ದಾನಿಯ ಯಕೃತ್ ಜೋಡಿಸುವ ಮೂಲಕ ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಯಶಸ್ವಿ ಯಕೃತ್ ಕಸಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದು ಆಸ್ಪತ್ರೆಯ ಗ್ಯಾಸ್ಟ್ರೋ ಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ.ಶಿರನ್ ಶೆಟ್ಟಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ದೀರ್ಘ ಕಾಲದ ಯಕೃತ್ (ಲಿವರ್) ಕಾಯಿಲೆ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ ಸುಮಾರು 56 ವರ್ಷದ ವ್ಯಕ್ತಿಯನ್ನು ಆಸ್ಪತ್ರೆಯ ವೈದ್ಯರಾದ ಡಾ.ಭರತ್ ಕುಮಾರ್ ಭಟ್ ಮತ್ತವರ ತಂಡ ಹಾಗೂ ಬೆಂಗಳೂರು ಮಣಿಪಾಲ ಆಸ್ಪತ್ರೆಯ ಡಾ.ಜಯಂತ್ ರೆಡ್ಡಿ ಮತ್ತು ಡಾ.ದೀಪ್ತಿ ಕಸಿ ನಡೆಸಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಇದೀಗ ರೋಗಿ ಸಂಪೂರ್ಣ ಗುಣಮುಖರಾಗಿ ತನ್ನ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ ಎಂದರು.

ರೋಗಿ ಮಾತನಾಡಿ, ಜೀವನದಲ್ಲಿ ಭರವಸೆ ಕಳೆದುಕೊಂಡಿದ್ದ ತನಗೆ ಚಿಕಿತ್ಸೆ ಫಲಕಾರಿಯಾಗಿದ್ದು ಅದಕ್ಕಾಗಿ ಶ್ರಮಿಸಿದ ವೈದ್ಯರ ತಂಡವನ್ನು ಅಭಿನಂದಿಸುವುದಾಗಿ ತಿಳಿಸಿದರು. ಸದ್ಯಕ್ಕೆ ವಾಹನ ಚಾಲನೆ ಹೊರತುಪಡಿಸಿ ಮಿಕ್ಕೆಲ್ಲಾ ಚಟುವಟಿಕೆಗಳನ್ನು ನಡೆಸುತ್ತುರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಎಂಸಿ ಮಣಿಪಾಲ ವೈದ್ಯಕೀಯ ನಿರ್ದೇಶಕ ಡಾ.ಅವಿನಾಶ್ ಶೆಟ್ಟಿ, ವೈದ್ಯರಾದ ಡಾ.ಜಯಂತ್ ರೆಡ್ಡಿ, ಡಾ.ದೀಪ್ತಿ, ಡಾ.ಭರತ್ ಕುಮಾರ್ ಶೆಟ್ಟಿ, ಆಸ್ಪತ್ರೆ ಸಿಓಓ ಸುಧಾಕರ್ ಕಂಟಿಪುಡಿ, ಮಾರುಟ್ಟೆ ಪ್ರಬಂಧಕ ಮೋಹನ ಶೆಟ್ಟಿ ಮೊದಲಾದವರಿದ್ದರು.



ಉದಯಕಾಲ
ಕನ್ನಡಿಗರ ಜೀವಾಳ

# ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಮೊದಲ ಲಿವರ್ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ

ಉದಯಕಾಲ ನ್ಯೂಸ್

ಉಡುಪಿ: ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ (ಕೆಎಂಸಿ)ಯಲ್ಲಿ ಮೊದಲ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದಿದೆ. ದೀರ್ಘಕಾಲದ ಯಕೃತ್ ಕಾಯಿಲೆ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಗೆ, ಮೃತ ದಾನಿ ಕಸಿ ಕಾರ್ಯಕ್ರಮದಡಿಯಲ್ಲಿ ಯಕೃತ್ತು ಕಸಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಮಣಿಪಾಲ ಮಾಹೆಯ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಟಿಪುಡಿ ಹೇಳಿದರು.

ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಸ್ತ್ರಚಿಕಿತ್ಸೆಯ ನಂತರ ವಿಶೇಷ ಟ್ರಾನ್ಸ್‌ಪ್ಲಾಂಟ್ ಐಸಿಯುವಿನಲ್ಲಿ ಸೂಕ್ಷ್ಮ ನಿಗಾದೊಂದಿಗೆ ಚಿಕಿತ್ಸೆ ನೀಡಲಾಗಿದ್ದು, ರೋಗಿ ಸ್ಥಿರವಾಗಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ ಎಂದು ಹೇಳಿದರು.

ಕಸ್ತೂರ್ಬಾ ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ ಮತ್ತು ತಂಡವು ಆರಂಭಿಕ ಮೌಲ್ಯಮಾಪನವ ನಡೆಸಿದಾಗ, ಯಕೃತ್ ಕಸಿ ನಡೆಸಿದರೆ ಮಾತ್ರ ರೋಗಿ ಬದುಕುಳಿಯಲು ಸಾಧ್ಯ ಎಂಬುದು ಸ್ಪಷ್ಟವಾಯಿತು. ಬಳಿಕ ರೋಗಿಯನ್ನು ಎಚ್‌ಪಿಬಿ ಮತ್ತು ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಟ್ರಾನ್ಸ್‌ಪ್ಲಾಂಟ್ ಸರ್ಜರಿಯ ಪ್ರಮುಖ ಸಲಹೆಗಾರ ಡಾ. ಜಯಂತ್ ರೆಡ್ಡಿ ನೇತೃತ್ವದ




ಕಸಿ ತಂಡಕ್ಕೆ ಶಿಫಾರಸು ಮಾಡಲಾಯಿತು ಎಂದರು.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಐಸಿಯು ತಂಡದೊಂದಿಗೆ ಡಾ. ಭರತ್ ಕುಮಾರ್ ಭಟ್ ಮತ್ತು ತಂಡವು ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ ಎಂದು ತಿಳಿಸಿದರು.

ಜಿಲ್ಲೆಯ ಜನರಿಗೆ ಸುಧಾರಿತ ಚಿಕಿತ್ಸೆಯನ್ನು ಮನೆಬಾಗಿಲಿಗೆ ತಲುಪಿಸುವ ಗುರಿ ಯಶಸ್ವಿಯಾಗಿದೆ. ಕೇವಲ ಚಿಕಿತ್ಸೆಯ ಗುಣಮಟ್ಟದ ಮೇಲೆ ಮಾತ್ರವಲ್ಲದೆ, ಅದನ್ನು ಜನ ಸಾಮಾನ್ಯರಿಗೆ ಕೈಗೆಟುಕುವಂತೆ ಮಾಡುವಲ್ಲಿಯೂ ಗಮನ ಹರಿಸಿದ್ದೇವೆ. ಪ್ರಮುಖ ವಿಮಾ ಕಂಪನಿಗಳು ಮತ್ತು ಸರ್ಕಾರದ ಆರೋಗ್ಯ ಯೋಜನೆಗಳ ಅಡಿಯಲ್ಲಿ ಅರ್ಹ ರೋಗಿಗಳು ಈ ಕಸಿ ಚಿಕಿತ್ಸೆಯ ಪ್ರಯೋಜನ ಪಡೆಯಬಹುದು ಎಂದು ಹೇಳಿದರು.

ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ಡಾ. ಶಿರನ್ ಶೆಟ್ಟಿ ಮಾತನಾಡಿ, ಮೊದಲು ಲಿವರ್ ಕಸಿಗಾಗಿ ರೋಗಿಗಳು ಬೆಂಗಳೂರಿನಂತಹ ದೂರದ ನಗರಗಳಿಗೆ ಹೋಗಬೇಕಿತ್ತು. ಆದರೆ ಈಗ ಮಣಿಪಾಲದಲ್ಲೇ ಈ ಸೌಲಭ್ಯ ದೊರೆಯುತ್ತಿರುವುದರಿಂದ ತುರ್ತು ಸಮಯದಲ್ಲಿ ರೋಗಿಗಳಿಗೆ ಅನುಕೂಲವಾಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯ ಡಾ. ಜಯಂತ್ ರೆಡ್ಡಿ, ಕಸ್ತೂರ್ಬಾ ಆಸ್ಪತ್ರೆಯ ಡಾ. ಭರತ್ ಕುಮಾರ್ ಭಟ್, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ, ಡಾ. ದೀಪ್ತಿ ರಾಮಚಂದ್ರ ಉಪಸ್ಥಿತರಿದ್ದರು.

**INDIAN EXPRESS**

# Kasturba Hosp performs deceased donor liver transplant

**EXPRESS NEWS SERVICE** @ Udupi

KASTURBA Hospital, Manipal, has successfully performed the first deceased donor liver transplant of the Udupi district, according to a release from the hospital.

Amid profound personal loss, a bereaved family chose to donate their loved one's organs, offering another patient a renewed chance at life.

The hospital expresses its deepest gratitude to the donor and the family for their courage and compassion.

The recipient, a 56-year-old man diagnosed with advanced chronic liver disease and portal hypertension, underwent detailed multidisciplinary evaluation under the deceased donor transplant programme. Following careful planning and organ allocation protocols, he underwent a complex liver transplant surgery.

Post-operatively, he was managed in the dedicated transplant ICU with structured monitoring and protocol-driven care.

He was discharged in stable condition.



Dr. Shiran Shetty, Professor, Department of Gastroenterology & Hepatology, Kasturba Hospital, Manipal, and his team carried out the initial evaluation, which showed that the patient's liver disease had progressed to a stage where a transplant was the best option for survival and long-term recovery. Understanding the urgency, Dr. Shetty referred the patient to the transplant team led by Dr. Jayanth Reddy, Lead Consultant - HPB and Liver and Pancreatic Transplant Surgery.

The procedure involved a highly coordinated multidisciplinary team for a successful completion of the transplant.

ಹೊಸ ದಿಗಂತ
ಗುರುವಾರ 02, ಏಪ್ರಿಲ್ 2026

# ವೈದ್ಯಕೀಯ ಕ್ಷೇತ್ರದಲ್ಲಿ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಐತಿಹಾಸಿಕ ಸಾಧನೆ

## ಉಡುಪಿಯಲ್ಲೇ ಪ್ರಥಮ: 'ಮೃತ ದಾನಿ ಯಕೃತ್ತು ಕಸಿ' ಯಶಸ್ವಿ




**ಮಣಿಪಾಲ:** ಉಡುಪಿ ಜಿಲ್ಲೆಯ ವೈದ್ಯಕೀಯ ಇತಿಹಾಸದಲ್ಲಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯು ಶನಿವಾರ ಅಭೂತಪೂರ್ವ ಮೈಲಿಗಲ್ಲನ್ನು ಸ್ಥಾಪಿಸಿದೆ. ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಮೃತ ದಾನಿಯ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸುವ ಮೂಲಕ ಕರಾವಳಿ ಕರ್ನಾಟಕದ ರೋಗಿಗಳಿಗೆ ಸುಧಾರಿತ ಕಸಿ ಚಿಕಿತ್ಸೆ ಇನ್ನು ಮುಂದೆ ಸ್ಥಳೀಯವಾಗಿಯೇ ಲಭ್ಯವಿದೆ ಎಂಬ ಭರವಸೆ ನೀಡಿದೆ.

ದೀರ್ಘಕಾಲದ ಯಕೃತ್ ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಗೆ ಈ ಸಂಕೀರ್ಣ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಆಳವಾದ ವೈಯಕ್ತಿಕ ನಷ್ಟದ ನಡುವೆಯೂ ಅಂಗಾಂಗ ದಾನ ಮಾಡಲು ಮುಂದೆ ಬಂದ ದುಃಖಿತ ಕುಟುಂಬದ ಔದಾರ್ಯದಿಂದಾಗಿ ರೋಗಿಗೆ ಹೊಸ ಬದುಕು ಲಭಿಸಿದೆ. ಈ ಐತಿಹಾಸಿಕ ಶಸ್ತ್ರಚಿಕಿತ್ಸೆಯನ್ನು ಕಸ್ತೂರ್ಬಾ ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ (ಎಚ್‌ಪಿಬಿ) ಮತ್ತು ಲಿವರ್ ಹಾಗೂ ಪ್ಯಾಂಕ್ರಿಯಾಟಿಕ್ ಟ್ರಾನ್ಸ್‌ಪ್ಲಾಂಟ್ ಸರ್ಜರಿಯ ಪ್ರಮುಖ ಸಲಹೆಗಾರ ಡಾ. ಜಯಂತ್ ರೆಡ್ಡಿ, ಗ್ಯಾಸ್ಟ್ರೋಎಂಟರಾಲಜಿ ಸರ್ಜರಿ ವಿಭಾಗದ ಸಹ ಪ್ರಾಧ್ಯಾಪಕ ಡಾ. ಭರತ್ ಕುಮಾರ್ ಭಟ್ ಹಾಗೂ ಸಲಹೆಗಾರರಾದ ಡಾ. ದೀಪ್ತಿ ರಾಮಚಂದ್ರ ಅವರನ್ನೊಳಗೊಂಡ ಬಹುಶಿಸ್ತೀಯ ತಂಡವು ಯಶಸ್ವಿಯಾಗಿ ನಿರ್ವಹಿಸಿದೆ. ಶಸ್ತ್ರಚಿಕಿತ್ಸೆಯ ನಂತರ ರೋಗಿಯು ಸ್ಥಿರ ಸ್ಥಿತಿಯಲ್ಲಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಟಿಪುಡಿ ಅವರು, ನಮ್ಮ ಗಮನವು ಕೇವಲ ಕ್ಲಿನಿಕಲ್ ಶ್ರೇಷ್ಠತೆಯ ಮೇಲೆ ಮಾತ್ರವಲ್ಲದೆ, ಯಕೃತ್ತು ಕಸಿಯನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪುವಂತೆ ಮಾಡುವತ್ತಲೂ ಇದೆ ಎಂದರು.

ಆಸ್ಪತ್ರೆಯು ಪ್ರಮುಖ ಟಿಪಿಎ ಹಾಗೂ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅರ್ಹ ರೋಗಿಗಳು ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳ ಅಡಿಯೂ ಈ ಚಿಕಿತ್ಸೆಯ ಪ್ರಯೋಜನ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದರು.

ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಅವರು ಉಪಸ್ಥಿತರಿದ್ದ ಪತ್ರಿಕಾಗೋಷ್ಠಿಯಲ್ಲಿ, ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗಳ ಸಹಯೋಗದೊಂದಿಗೆ ನಡೆಯುತ್ತಿರುವ ಈ ಕಸಿ ಕಾರ್ಯಕ್ರಮವು ಉಡುಪಿ ಮತ್ತು ನೆರೆಯ ಜಿಲ್ಲೆಗಳ ರೋಗಿಗಳಿಗೆ ಸಂಕೀರ್ಣ ಚಿಕಿತ್ಸೆಗಾಗಿ ದೂರದ ಪ್ರಯಾಣ ಮಾಡುವ ಅಗತ್ಯವನ್ನು ಕಡಿಮೆ ಮಾಡಲಿದೆ ಎಂದು ಸ್ಪಷ್ಟಪಡಿಸಲಾಯಿತು.

ಈ ಸಂದರ್ಭದಲ್ಲಿ ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಇವರೊಂದಿಗೆ ಯಶಸ್ವಿ ಯಕೃತ್ತು ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದ ಫಲಾನುಭವಿ ರೋಗಿಯು ಕೂಡ ಈ ಸಂದರ್ಭದಲ್ಲಿ ಹಾಜರಿದ್ದರು.

ವಿಜಯವಾಣಿ
ಗುರುವಾರ 2 ಏಪ್ರಿಲ್ 2026
2 APRIL 2026

# ಜಿಲ್ಲೆಯಲ್ಲೇ ಪ್ರಥಮ ಲಿವರ್ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ

■ **ಮಣಿಪಾಲ ಇಂಟಿಗ್ರೇಟೆಡ್ ಲಿವರ್ ಆ್ಯಂಡ್ ಟ್ರಾನ್ಸ್‌ಪ್ಲಾಂಟ್ ಕ್ಲಿನಿಕ್‌ನಲ್ಲಿ ಸಾಧನೆ**

**ಉಡುಪಿ:** ಜಿಲ್ಲೆಯ ವೈದ್ಯಕೀಯ ಇತಿಹಾಸದಲ್ಲಿ ಹೊಸ ದಾಖಲೆ ನಿರ್ಮಾಣವಾಗಿದ್ದು, ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಬೆಂಗಳೂರು ಮಣಿಪಾಲ್ ಆಸ್ಪತ್ರೆ ಸಹಯೋಗದೊಂದಿಗೆ ಸ್ಥಾಪಿಸಲಾದ ಮಣಿಪಾಲ ಇಂಟಿಗ್ರೇಟೆಡ್ ಲಿವರ್ ಆ್ಯಂಡ್ ಟ್ರಾನ್ಸ್‌ಪ್ಲಾಂಟ್ ಕ್ಲಿನಿಕ್‌ನಲ್ಲಿ ಮೊದಲ ಬಾರಿಗೆ ಮೃತ ದಾನಿ ಯಕೃತ್(ಲಿವರ್) ಪಡೆದು ದೀರ್ಘಕಾಲದ ಯಕೃತ್ ಕಾಯಿಲೆ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ ಕುಂದಾಪುರ ಮೂಲದ 56 ವರ್ಷದ ವ್ಯಕ್ತಿಗೆ ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸುವ ಮೂಲಕ ಸುಧಾರಿತ ವೈದ್ಯಕೀಯ ಸೇವೆಯಲ್ಲಿ ಕ್ರಾಂತಿ ಮಾಡಲಾಗಿದೆ ಎಂದು ಮಾಹೆ ಬೋಧನಾ ಆಸ್ಪತ್ರೆಗಳ ಸಿಒಒ ಡಾ.ಸುಧಾಕರ್ ಕಂಟಿಪುಡಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲೆಯ ಜನರಿಗೆ ಸುಧಾರಿತ ಚಿಕಿತ್ಸೆಯನ್ನು ಮನೆಬಾಗಿಲಿಗೆ ತಲುಪಿಸುವ ಗುರಿ ಯಶಸ್ವಿಯಾಗಿದೆ. ಕೇವಲ ಚಿಕಿತ್ಸೆಯ ಗುಣಮಟ್ಟದ ಮೇಲೆ ಮಾತ್ರವಲ್ಲದೆ, ಅದನ್ನು ಜನ ಸಾಮಾನ್ಯರಿಗೆ ಕೈಗೆಟುಕುವಂತೆ ಮಾಡುವಲ್ಲಿಯೂ ಗಮನ ಹರಿಸಿದ್ದೇವೆ. ಪ್ರಮುಖ ವಿಮಾ ಕಂಪನಿಗಳು ಮತ್ತು ಸರ್ಕಾರದ ಆರೋಗ್ಯ ಯೋಜನೆಗಳ ಅಡಿಯಲ್ಲಿ ಅರ್ಹ ರೋಗಿಗಳು ಈ ಕಸಿ ಚಿಕಿತ್ಸೆಯ ಪ್ರಯೋಜನ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ಡಾ.ಶಿರನ್ ಶೆಟ್ಟಿ ಮಾತನಾಡಿ, 4 ವರ್ಷದ ಹಿಂದೆ ರೋಗಿಯ ಪ್ರಾಥಮಿಕ ತಪಾಸಣೆ ನಡೆಸಲಾಗಿತ್ತು. ನಂತರದ ದಿನಗಳಲ್ಲಿ ನಿರಂತರ ಚಿಕಿತ್ಸೆ ಪಡೆಯುತ್ತಿದ್ದು, 2 ತಿಂಗಳ ಹಿಂದೆ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಇದೀಗ ಅವರು ಆರೋಗ್ಯವಾಗಿದ್ದಾರೆ. ಮೊದಲು ಲಿವರ್ ಕಸಿಗಾಗಿ ರೋಗಿಗಳು ಬೆಂಗಳೂರಿನಂತಹ ದೂರದ ನಗರಗಳಿಗೆ ಹೋಗಬೇಕಿತ್ತು. ಆದರೆ ಈಗ ಮಣಿಪಾಲದಲ್ಲೇ ಈ ಸೌಲಭ್ಯ ದೊರೆಯುತ್ತಿರುವುದರಿಂದ ತುರ್ತು ಸಮಯದಲ್ಲಿ ರೋಗಿಗಳಿಗೆ ಅನುಕೂಲವಾಗಲಿದೆ ಎಂದರು. ಬೆಂಗಳೂರಿನ ಮಣಿಪಾಲ್ ಆಸ್ಪತ್ರೆ ತಜ್ಞ ವೈದ್ಯ ಡಾ.ಜಯಂತ್ ರೆಡ್ಡಿ, ಕಸ್ತೂರ್ಬಾ ಆಸ್ಪತ್ರೆ ಡಾ.ಭರತ್ ಕುಮಾರ್ ಭಟ್, ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಡಾ.ದೀಪ್ತಿ ರಾಮಚಂದ್ರ, ಗುಣಮುಖರಾದ ರೋಗಿ ಉಪಸ್ಥಿತರಿದ್ದರು.

THE TIMES OF INDIA, MANGALURU
THURSDAY, APRIL 2, 2026

# Liver of deceased donor transplanted

**Udupi:** Kasturba Hospital, Manipal, a teaching hospital of KMC and a constituent unit of MAHE, has successfully performed the first deceased donor liver transplant in Udupi. A bereaved family chose to donate their loved one's organs, offering another patient a renewed chance at life.

The recipient, a 56-year-old man diagnosed with advanced chronic liver disease and portal hypertension, underwent detailed multidisciplinary evaluation under the deceased donor transplant programme. Following careful planning and organ allocation protocols, he underwent a complex liver transplant surgery. Postoperatively, he was managed in the dedicated transplant ICU with structured monitoring and protocol-driven care. His recovery progressed steadily, and he was discharged in stable condition. Dr Shiran Shetty, professor, department of gastroenterology & hepatology, Kasturba Hospital, Manipal, and his team carried out the initial evaluation, which showed that the patient's liver disease progressed to a stage where a transplant was the best option for survival and long-term recovery.

**The recipient's recovery progressed steadily, and he was discharged in stable condition**

He told reporters on Wednesday, that understanding the urgency, he referred the patient to the transplant team led by Dr Jayanth Reddy, lead consultant–HPB & liver and pancreatic transplant surgery. The procedure involved a highly coordinated multidisciplinary team, including Dr Bharath Kumar Bhat and his team, along with the ICU team at Kasturba Hospital, Manipal. TNN

**SUDDI SANCHALANA**

**LINK:** https://suddisanchalana.com/first-deceased-donor-liver-transplant-surgery-in-udupi-district-from-kasturba-hospital-manipal

# ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಿಂದ ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ

ಟ್ರೆಂಡಿಂಗ್ 2 Apr 2026




ಮಣಿಪಾಲ, ಎ.1: ಮಾಹೆಯ ಸಹ ಘಟಕವಾದ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಪರಿಣಿತ ವೈದ್ಯರು ಉಡುಪಿ ಜಿಲ್ಲೆಯಲ್ಲಿ ಇದೇ ಮೊದಲ ಬಾರಿ ಮೃತ ದಾನಿಯೊಬ್ಬರ ಯಕೃತ್‌ನ(ಲೀವರ್) ಕಸಿ ಶಸ್ತ್ರಚಿಕಿತ್ಸೆಯನ್ನು ರೋಗಿ ಯೊಬ್ಬರ ಮೇಲೆ ಯಶಸ್ವಿಯಾಗಿ ನಡೆಸಿದ್ದಾರೆ. ಯಕೃತ್ ಕಸಿ ಮಾಡಿಸಿಕೊಂಡ 56ರ ಹರೆಯದ ರೋಗಿ ಈಗ ಆರೋಗ್ಯವಂತರಾಗಿದ್ದಾರೆ ಎಂದು ಕೆಎಂಸಿ ಆಸ್ಪತ್ರೆಯ ಡಾ.ರಾಮದಾಸ ಎಂ.ಪೈ ಬ್ಲಾಕ್‌ನಲ್ಲಿ ಕರೆದ ಸುದ್ದಿ ಗೋಷ್ಠಿಯಲ್ಲಿ ಮಾಹೆಯ ಬೋಧನಾ ಆಸ್ಪತ್ರೆಯ ಸಿಒಒ ಡಾ.ಸುಧಾಕರ ಕಾಂತಿಪುಡಿ ತಿಳಿಸಿದ್ದಾರೆ.

ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಮೆದುಳು ನಿಷ್ಕ್ರಿಯಗೊಂಡ 42ಹರೆಯದವರ ಲೀವರ್‌ನ್ನು ದಾನ ಮಾಡಲು ದು:ಖಿತ ಕುಟುಂಬ ನಿರ್ಧರಿಸಿದ್ದು, ಇದರಿಂದಾಗಿ ಯಕೃತ್‌ನ ತೀವ್ರ ತೊಂದರೆಯಿಂದ ಬಳಲುತಿದ್ದ ಕೋಟೇಶ್ವರ ಮೂಲದ ರೋಗಿ ಅದನ್ನು ಪಡೆದು ಆರೋಗ್ಯವನ್ನು ಮರಳಿ ಪಡೆಯಲು ಸಾಧ್ಯವಾಯಿತು ಎಂದವರು ಹೇಳಿದರು.

ದೀರ್ಘಕಾಲದ ಯಕೃತ್ (ಲೀವರ್) ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಯನ್ನು ಮೃತ ದಾನಿಯ ಕಸಿ ಕಾರ್ಯಕ್ರಮದಡಿಯಲ್ಲಿ ವಿವರವಾದ ಬಹು ಆಯಾಮ ಮೌಲ್ಯಮಾಪನಕ್ಕೆ ಒಳಪಡಿಸಿ, ಎಚ್ಚರಿಕೆಯ ಯೋಜನೆ ಮತ್ತು ಅಂಗಾಂಗ ಹಂಚಿಕೆ ಮಾರ್ಗಸೂಚಿಗಳಂತೆ ಯಕೃತ್ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಯಿತು ಎಂದು ಡಾ.ಸುಧಾಕರ್ ವಿವರಿಸಿದರು.

ಶಸ್ತ್ರಚಿಕಿತ್ಸೆಯ ನಂತರ, ಅವರನ್ನು ವೈದ್ಯರ ತೀವ್ರ ನಿಗಾದಲ್ಲಿರಿಸಿ ರಚನಾತ್ಮಕ ಮೇಲ್ವಿಚಾರಣೆ ಮತ್ತು ಪ್ರೋಟೋ ಕಾಲ್-ಚಾಲಿತ ಆರೈಕೆಯೊಂದಿಗೆ ಕಸಿ ಆರೈಕೆಗಾಗಿಯೇ ಮೀಸಲಾದ ಐಸಿಯುನಲ್ಲಿ ಇರಿಸಲಾಯಿತು. ಅವರ ಚೇತರಿಕೆ ಸ್ಥಿರವಾಗಿ ಮುಂದುವರೆದ ಕಾರಣ ಇದೀಗ ಅವರನ್ನು ಆಸ್ಪತ್ರೆಯಿಂದ ಬಿಡುಗಗೊಳಿಸಲಾಗಿದೆ ಎಂದರು.

ಕಸ್ತೂರ್ಬಾ ಆಸ್ಪತೆಯ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ ಮತವರ ತಂಡ ಆರಂಭಿಕ ಮೌಲ್ಯಮಾಪನದ ವೇಳೆ ಯಕೃತ್ ಕಸಿಯಿಂದ ಮಾತ್ರ ಅವರು ಬದುಕುಳಿದು ಚೇತರಿಕೆಗೆ ಉತ್ತಮ ಅವಕಾಶವಿದೆ ಎಂಬ ನಿರ್ಧಾರಕ್ಕೆ ಬಂದಿತ್ತು. ಬೆಂಗಳೂರು ಮಣಿಪಾಲ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಜಯಂತ್ ರೆಡ್ಡಿ ನೇತೃತ್ವದ ತಂಡ ಮಣಿಪಾಲದ ಕೆಎಂಸಿಯಲ್ಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಸಿದೆ.ಬೆಂಗಳೂರಿನ ಡಾ.ದೀಪ್ತಿ ರಾಮಚಂದ್ರ, ಮಣಿಪಾಲ ಗ್ಯಾಸ್ಟ್ರೋ ಎಂಟರಾಲಜಿ ಸರ್ಜರಿ ವಿಭಾಗದ ಡಾ.ಭರತ್‌ಕುಮಾರ್ ಭಟ್ ಮತ್ತವರ ಬಹುಶಿಸ್ತೀಯ ತಂಡವನ್ನು ಇದರಲ್ಲಿ ಪಾಲ್ಗೊಂಡಿತ್ತು ಎಂದರು.

**UDUPI XPRESS**

**LINK:** https://udupixpress.com/first-deceased-donor-liver-transplant-surgery-in-udupi-district-from-manipal-kasturba-hospital/

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಿಂದ ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ

April 2, 2026




ಮಣಿಪಾಲ: ಮಾಹೆಯ ಸಹ ಘಟಕವಾದ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಪರಿಣಿತ ವೈದ್ಯರು ಉಡುಪಿ ಜಿಲ್ಲೆಯಲ್ಲಿ ಇದೇ ಮೊದಲ ಬಾರಿ ಮೃತ ದಾನಿಯೊಬ್ಬರ ಯಕೃತ್‌ನ(ಲೀವರ್) ಕಸಿ ಶಸ್ತ್ರಚಿಕಿತ್ಸೆಯನ್ನು ರೋಗಿ ಯೊಬ್ಬರ ಮೇಲೆ ಯಶಸ್ವಿಯಾಗಿ ನಡೆಸಿದ್ದಾರೆ. ಯಕೃತ್ ಕಸಿ ಮಾಡಿಸಿಕೊಂಡ 56ರ ಹರೆಯದ ರೋಗಿ ಈಗ ಆರೋಗ್ಯವಂತರಾಗಿದ್ದಾರೆ ಎಂದು ಕೆಎಂಸಿ ಆಸ್ಪತ್ರೆಯ ಡಾ.ರಾಮದಾಸ ಎಂ.ಪೈ ಬ್ಲಾಕ್‌ನಲ್ಲಿ ಕರೆದ ಸುದ್ದಿ ಗೋಷ್ಠಿಯಲ್ಲಿ ಮಾಹೆಯ ಬೋಧನಾ ಆಸ್ಪತ್ರೆಯ ಸಿಓಓ ಡಾ.ಸುಧಾಕರ ಕಾಂತಿಪುಡಿ ತಿಳಿಸಿದ್ದಾರೆ.

ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಮೆದುಳು ನಿಷ್ಕ್ರಿಯಗೊಂಡ 42ಹರೆಯದವರ ಲೀವರ್‌ನ್ನು ದಾನ ಮಾಡಲು ದು:ಖಿತ ಕುಟುಂಬ ನಿರ್ಧರಿಸಿದ್ದು ಇದರಿಂದಾಗಿ ಯಕೃತ್‌ನ ತೀವ್ರ ತೊಂದರೆಯಿಂದ ಬಳಲುತಿದ್ದ ಕೋಟೇಶ್ವರ ಮೂಲದ ರೋಗಿ ಅದನ್ನು ಪಡೆದು ಆರೋಗ್ಯವನ್ನು ಮರಳಿ ಪಡೆಯಲು ಸಾಧ್ಯವಾಯಿತು ಎಂದವರು ಹೇಳಿದರು.

ದೀರ್ಘಕಾಲದ ಯಕೃತ್ (ಲೀವರ್) ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಯನ್ನು ಮೃತ ದಾನಿಯ ಕಸಿ ಕಾರ್ಯಕ್ರಮದಡಿಯಲ್ಲಿ ವಿವರವಾದ ಬಹು ಆಯಾಮ ಮೌಲ್ಯಮಾಪನಕ್ಕೆ ಒಳಪಡಿಸಿ, ಎಚ್ಚರಿಕೆಯ ಯೋಜನೆ ಮತ್ತು ಅಂಗಾಂಗ ಹಂಚಿಕೆ ಮಾರ್ಗಸೂಚಿಗಳಂತೆ ಯಕೃತ್ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಯಿತು ಎಂದು ಡಾ.ಸುಧಾಕರ್ ವಿವರಿಸಿದರು.

ಶಸ್ತ್ರಚಿಕಿತ್ಸೆಯ ನಂತರ, ಅವರನ್ನು ವೈದ್ಯರ ತೀವ್ರ ನಿಗಾದಲ್ಲಿರಿಸಿ ರಚನಾತ್ಮಕ ಮೇಲ್ವಿಚಾರಣೆ ಮತ್ತು ಪ್ರೋಟೋ ಕಾಲ್-ಚಾಲಿತ ಆರೈಕೆಯೊಂದಿಗೆ ಕಸಿ ಆರೈಕೆಗಾಗಿಯೇ ಮೀಸಲಾದ ಐಸಿಯುನಲ್ಲಿ ಇರಿಸಲಾಯಿತು. ಅವರ ಚೇತರಿಕೆ ಸ್ಥಿರವಾಗಿ ಮುಂದುವರೆದ ಕಾರಣ ಇದೀಗ ಅವರನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿದೆ ಎಂದರು.

ಕಸ್ತೂರ್ಬಾ ಆಸ್ಪತೆಯ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ ಮತವರ ತಂಡ ಆರಂಭಿಕ ಮೌಲ್ಯಮಾಪನದ ವೇಳೆ ಯಕೃತ್ ಕಸಿಯಿಂದ ಮಾತ್ರ ಅವರು ಬದುಕುಳಿದು ಚೇತರಿಕೆಗೆ ಉತ್ತಮ ಅವಕಾಶವಿದೆ ಎಂಬ ನಿರ್ಧಾರಕ್ಕೆ ಬಂದಿತ್ತು. ಬೆಂಗಳೂರು ಮಣಿಪಾಲ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಜಯಂತ್ ರೆಡ್ಡಿ ನೇತೃತ್ವದ ತಂಡ ಮಣಿಪಾಲದ ಕೆಎಂಸಿಯಲ್ಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಸಿದೆ.ಬೆಂಗಳೂರಿನ ಡಾ.ದೀಪ್ತಿ ರಾಮಚಂದ್ರ, ಮಣಿಪಾಲ ಗ್ಯಾಸ್ಟ್ರೋ ಎಂಟರಾಲಜಿ ಸರ್ಜರಿ ವಿಭಾಗದ ಡಾ.ಭರತ್‌ಕುಮಾರ್ ಭಟ್ ಮತ್ತವರ ಬಹುಶಿಸ್ತೀಯ ತಂಡವನ್ನು ಇದರಲ್ಲಿ ಪಾಲ್ಗೊಂಡಿತ್ತು ಎಂದರು.

ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗಳ ಸಹಯೋಗದೊಂದಿಗೆ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಡೆಯುತ್ತಿ ರುವ ಲಿವರ್ ಕಸಿ ಶಸ್ತ್ರಚಿಕಿತ್ಸೆ ಉಡುಪಿ ಮತ್ತು ನೆರೆಯ ಜಿಲ್ಲೆಗಳ ರೋಗಿಗಳಿಗೆ ಹೊಸ ಆಶಾಕಿರಣವಾಗಿದೆ ಎಂದು ಕೆಎಂಸಿಯ ಗ್ಯಾಸ್ಟ್ರೋ ಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ.ಶಿರನ್ ಶೆಟ್ಟಿ ತಿಳಿಸಿದರು.

ಮಾನವ ದೇಹದ ಬಹುಮುಖ್ಯ ಅಂಗವಾಗಿರುವ ನೂರಾರು ಕಾರ್ಯಗಳನ್ನು ನೆರವೇರಿಸುವ ಯಕೃತ್‌ನ್ನು ಭಾಗಶ: ದಾನ ಮಾಡಿದರೂ, ಕೆಲವೇ ಸಮಯದಲ್ಲಿ ಮತ್ತೆ ಅದು ಚಿಗುರಿಕೊಳ್ಳುತ್ತದೆ. ಮಾನವ ದೇಹದಲ್ಲಿ ಮತ್ತೆ ಬೆಳೆಯುವ ಏಕೈಕ ಅಂಗ ಇದಾಗಿದೆ. ಹೀಗಾಗಿ ಸಂಬಂಧಿಗಳಲ್ಲಿ ಯಾರಾದರೂ ಯಕೃತ್ ತೊಂದರೆಗೊಳಗಾಗಿದ್ದರೆ ಅವರ ಕುಟುಂಬದವರೇ ಯಾರಾದರೂ ತನ್ನ ಯಕೃತ್‌ನ ಕೆಲ ಭಾಗವನ್ನು ದಾನ ಮಾಡಬಹುದು ಎಂದು ಡಾ.ಜಯಂತ್ ರೆಡ್ಡಿ ತಿಳಿಸಿದರು.

**BHAVANA TV**

**LINK:** https://bhavanatv.com/2026/4341/

MANIPAL

# ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಿಂದ ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ




**ಮಣಿಪಾಲ, 01 ಏಪ್ರಿಲ್ 2026:** ಕೆಎಂಸಿಯ ಬೋಧನಾ ಆಸ್ಪತ್ರೆ ಮತ್ತು ಮಾಹೆಯ ಘಟಕವಾದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲವು ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ, ಇದು ಈ ಪ್ರದೇಶದೊಳಗೆ ಸುಧಾರಿತ ಕಸಿ ಆರೈಕೆಯನ್ನು ಲಭ್ಯವಾಗುವಂತೆ ಮಾಡುವಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಗುರುತಿಸಿದೆ.

ಜೀವ ಉಳಿಸುವ ಈ ಪ್ರಕ್ರಿಯೆಯು ಅಸಾಧಾರಣ ಔದಾರ್ಯದ ಮೂಲಕ ಸಾಧ್ಯವಾಯಿತು. ಆಳವಾದ ವೈಯಕ್ತಿಕ ನಷ್ಟದ ನಡುವೆಯೂ, ದುಃಖಿತ ಕುಟುಂಬವೊಂದು ತಮ್ಮ ಪ್ರೀತಿಪಾತ್ರರ ಅಂಗಗಳನ್ನು ದಾನ ಮಾಡಲು ನಿರ್ಧರಿಸಿತು, ಇದರಿಂದಾಗಿ ಮತ್ತೊಬ್ಬ ರೋಗಿಗೆ ಬದುಕಲು ಹೊಸ ಅವಕಾಶ ದೊರೆಯಿತು. ದಾನಿ ಮತ್ತು ಕುಟುಂಬದ ಧೈರ್ಯ ಮತ್ತು ಸಹಾನುಭೂತಿಗಾಗಿ ಆಸ್ಪತ್ರೆಯು ತನ್ನ ಆಳವಾದ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ. ಅವರ ನಿಸ್ವಾರ್ಥ ನಿರ್ಧಾರವು ಮತ್ತೊಂದು ಕುಟುಂಬಕ್ಕೆ ಭರವಸೆಯನ್ನು ತಂದಿದೆ ಮತ್ತು ಅಂಗಾಂಗ ದಾನದ ನಿಜವಾದ ಮನೋಭಾವವನ್ನು ಪ್ರತಿಬಿಂಬಿಸುತ್ತದೆ.

Delta Exchange

ದೀರ್ಘಕಾಲದ ಯಕೃತ್ (ಲಿವರ್) ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಯನ್ನು ಮೃತ ದಾನಿ ಕಸಿ ಕಾರ್ಯಕ್ರಮದಡಿಯಲ್ಲಿ ವಿವರವಾದ ಬಹು ಆಯಾಮ ಮೌಲ್ಯಮಾಪನಕ್ಕೆ ಒಳಪಡಿಸಲಾಯಿತು. ಎಚ್ಚರಿಕೆಯ ಯೋಜನೆ ಮತ್ತು ಅಂಗಾಂಗ ಹಂಚಿಕೆ ಪ್ರೋಟೋಕಾಲ್‌ಗಳನ್ನು ಅನುಸರಿಸಿ, ಅವರು ಸಂಕೀರ್ಣವಾದ ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದರು. ಶಸ್ತ್ರಚಿಕಿತ್ಸೆಯ ನಂತರ, ಅವರನ್ನು ರಚನಾತ್ಮಕ ಮೇಲ್ವಿಚಾರಣೆ ಮತ್ತು ಪ್ರೋಟೋಕಾಲ್-ಚಾಲಿತ ಆರೈಕೆಯೊಂದಿಗೆ ಕಸಿ ಆರೈಕೆಗಾಗಿ ಮೀಸಲಾದ ಐಸಿಯುನಲ್ಲಿ ನಿರ್ವಹಿಸಲಾಯಿತು. ಅವರ ಚೇತರಿಕೆ ಸ್ಥಿರವಾಗಿ ಮುಂದುವರೆದು, ಅವರನ್ನು ಸ್ಥಿರ ಸ್ಥಿತಿಯಲ್ಲಿ ಬಿಡುಗಡೆ ಮಾಡಲಾಯಿತು.

ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ ಮತ್ತು ಅವರ ತಂಡ ಆರಂಭಿಕ ಮೌಲ್ಯಮಾಪನವನ್ನು ನಡೆಸಿದಾಗ, ಅವರ ಯಕೃತ್ತಿನ ಕಾಯಿಲೆಯು ಒಂದು ಹಂತಕ್ಕೆ ಮುಂದುವರೆದಿದ್ದು, ಯಕೃತ್ ಕಸಿ ಮಾಡುವಿಕೆ ಮಾತ್ರ ಬದುಕುಳಿಯುವ ಮತ್ತು ದೀರ್ಘಕಾಲೀನ ಚೇತರಿಕೆಗೆ ಉತ್ತಮ ಅವಕಾಶ ಎಂಬುದು ಸ್ಪಷ್ಟವಾಯಿತು. ಪ್ರಕರಣದ ತುರ್ತು ಮತ್ತು ಸಂಕೀರ್ಣತೆಯನ್ನು ಗುರುತಿಸಿದ ಡಾ. ಶೆಟ್ಟಿ, ರೋಗಿಯನ್ನು HPB & ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಟ್ರಾನ್ಸ್‌ಪ್ಲಾಂಟ್ ಸರ್ಜರಿಯ ಪ್ರಮುಖ ಸಲಹೆಗಾರ ಡಾ. ಜಯಂತ್ ರೆಡ್ಡಿ ನೇತೃತ್ವದ ಕಸಿ ತಂಡಕ್ಕೆ,

**TULUNADU VARTHE**

**LINK:** https://tulunaduvarthe.com/first-deceased-donor-liver-transplant-surgery-in-udupi-district-from-kasturba-hospital-manipal/

Uncategorized

# ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಿಂದ ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ

By **TNVOffice** - April 1, 2026 0




ಮಣಿಪಾಲ : ಕೆಎಂಸಿಯ ಬೋಧನಾ ಆಸ್ಪತ್ರೆ ಮತ್ತು ಮಾಹೆಯ ಘಟಕವಾದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲವು ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ, ಇದು ಈ ಪ್ರದೇಶದೊಳಗೆ ಸುಧಾರಿತ ಕಸಿ ಆರೈಕೆಯನ್ನು ಲಭ್ಯವಾಗುವಂತೆ ಮಾಡುವಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಗುರುತಿಸಿದೆ.

ಜೀವ ಉಳಿಸುವ ಈ ಪ್ರಕ್ರಿಯೆಯು ಅಸಾಧಾರಣ ಔದಾರ್ಯದ ಮೂಲಕ ಸಾಧ್ಯವಾಯಿತು. ಆಳವಾದ ವೈಯಕ್ತಿಕ ನಷ್ಟದ ನಡುವೆಯೂ, ದುಃಖಿತ ಕುಟುಂಬವೊಂದು ತಮ್ಮ ಪ್ರೀತಿಪಾತ್ರರ ಅಂಗಗಳನ್ನು ದಾನ ಮಾಡಲು ನಿರ್ಧರಿಸಿತು, ಇದರಿಂದಾಗಿ ಮತ್ತೊಬ್ಬ ರೋಗಿಗೆ ಬದುಕಲು ಹೊಸ ಅವಕಾಶ ದೊರೆಯಿತು. ದಾನಿ ಮತ್ತು ಕುಟುಂಬದ ಧೈರ್ಯ ಮತ್ತು ಸಹಾನುಭೂತಿಗಾಗಿ ಆಸ್ಪತ್ರೆಯು ತನ್ನ ಆಳವಾದ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ. ಅವರ ನಿಸ್ವಾರ್ಥ ನಿರ್ಧಾರವು ಮತ್ತೊಂದು ಕುಟುಂಬಕ್ಕೆ ಭರವಸೆಯನ್ನು ತಂದಿದೆ ಮತ್ತು ಅಂಗಾಂಗ ದಾನದ ನಿಜವಾದ ಮನೋಭಾವವನ್ನು ಪ್ರತಿಬಿಂಬಿಸುತ್ತದೆ.

ದೀರ್ಘಕಾಲದ ಯಕೃತ್ (ಲಿವರ್) ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಯನ್ನು ಮೃತ ದಾನಿ ಕಸಿ ಕಾರ್ಯಕ್ರಮದಡಿಯಲ್ಲಿ ವಿವರವಾದ ಬಹು ಆಯಾಮ ಮೌಲ್ಯಮಾಪನಕ್ಕೆ ಒಳಪಡಿಸಲಾಯಿತು. ಎಚ್ಚರಿಕೆಯ ಯೋಜನೆ ಮತ್ತು ಅಂಗಾಂಗ ಹಂಚಿಕೆ ಪ್ರೋಟೋಕಾಲ್‌ಗಳನ್ನು ಅನುಸರಿಸಿ, ಅವರು ಸಂಕೀರ್ಣವಾದ ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದರು. ಶಸ್ತ್ರಚಿಕಿತ್ಸೆಯ ನಂತರ, ಅವರನ್ನು ರಚನಾತ್ಮಕ ಮೇಲ್ವಿಚಾರಣೆ ಮತ್ತು ಪ್ರೋಟೋಕಾಲ್-ಚಾಲಿತ ಆರೈಕೆಯೊಂದಿಗೆ ಕಸಿ ಆರೈಕೆಗಾಗಿ ಮೀಸಲಾದ ಐಸಿಯುನಲ್ಲಿ ನಿರ್ವಹಿಸಲಾಯಿತು. ಅವರ ಚೇತರಿಕೆ ಸ್ಥಿರವಾಗಿ ಮುಂದುವರೆದು, ಅವರನ್ನು ಸ್ಥಿರ ಸ್ಥಿತಿಯಲ್ಲಿ ಬಿಡುಗಡೆ ಮಾಡಲಾಯಿತು.

**MAADHYAMA BIMBA NEWS**

**LINK:** https://maadhyamabimbanews.com/?p=17626

# ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಿಂದ ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ

by Madhyama Bimba April 1, 2026 0 236

SHARE 0




Post Views:

ಕೆಎಂಸಿಯ ಬೋಧನಾ ಆಸ್ಪತ್ರೆ ಮತ್ತು ಮಾಹೆಯ ಘಟಕವಾದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲವು ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ. ಇದು ಈ ಪ್ರದೇಶದೊಳಗೆ ಸುಧಾರಿತ ಕಸಿ ಆರೈಕೆಯನ್ನು ಲಭ್ಯವಾಗುವಂತೆ ಮಾಡುವಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಗುರುತಿಸಿದೆ.

ಜೀವ ಉಳಿಸುವ ಈ ಪ್ರಕ್ರಿಯೆಯು ಅಸಾಧಾರಣ ಔದಾರ್ಯದ ಮೂಲಕ ಸಾಧ್ಯವಾಯಿತು. ಆಳವಾದ ವೈಯಕ್ತಿಕ ನಷ್ಟದ ನಡುವೆಯೂ, ದುಃಖಿತ ಕುಟುಂಬವೊಂದು ತಮ್ಮ ಪ್ರೀತಿಪಾತ್ರರ ಅಂಗಗಳನ್ನು ದಾನ ಮಾಡಲು ನಿರ್ಧರಿಸಿತು.

**VIJAYAVANI NET**

**LINK:** https://www.vijayavani.net/category/udupi/the-first-liver-transplant-surgery-in-kmc-manipal

# ಉಡುಪಿ ಜಿಲ್ಲೆಯಲ್ಲೇ ಪ್ರಥಮ ಲಿವರ್ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ

Published by ಗೋಪಾಲಕೃಷ್ಣ ಪಾದೂರ್

Published On Apr 1, 2026, 4:53pm IST | Last updated :Apr 1, 2026, 4:53pm IST

Add as a preferred source on Google

ಬಳಿಕ ಓದಿ




ಮಾಹೆ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಟಿಪುಡಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

**ಉಡುಪಿ:** ಜಿಲ್ಲೆಯ ವೈದ್ಯಕೀಯ ಇತಿಹಾಸದಲ್ಲಿ ಹೊಸ ದಾಖಲೆ ನಿರ್ಮಾಣವಾಗಿದ್ದು, ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಬೆಂಗಳೂರು ಮಣಿಪಾಲ್ ಆಸ್ಪತ್ರೆ ಸಹಯೋಗದೊಂದಿಗೆ ಸ್ಥಾಪಿಸಲಾದ ಮಣಿಪಾಲ ಇಂಟಿಗ್ರೇಟೆಡ್ ಲಿವರ್ ಆ್ಯಂಡ್ ಟ್ರಾನ್ಸ್ ಪ್ಲಾಂಟ್ ಕ್ಲಿನಿಕ್‌ನಲ್ಲಿ ಮೊದಲ ಬಾರಿಗೆ ಮೃತ ದಾನಿ ಯಕೃತ್ತು (ಲಿವರ್) ಪಡೆದು ದೀರ್ಘಕಾಲದ ಯಕೃತ್ ಕಾಯಿಲೆ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ ಕುಂದಾಪುರ ಮೂಲದ 56 ವರ್ಷದ ವ್ಯಕ್ತಿಗೆ ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸುವ ಮೂಲಕ ಸುಧಾರಿತ ವೈದ್ಯಕೀಯ ಸೇವೆಯಲ್ಲಿ ಕ್ರಾಂತಿ ಮಾಡಲಾಗಿದೆ ಎಂದು ಮಾಹೆ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಟಿಪುಡಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

**DAIJIWORLD.COM**

**LINK:** https://www.daijiworld.com/news/newsDisplay?newsID=1310726

# Kasturba Hospital, Manipal performs Udupi district's first deceased donor liver transplant

Wed, Apr 01 2026 06:00:35 PM


Discover more

vehicle

Business advertising pac...

Personalized tribute servi...


*Media Release*

**Udupi, Apr 1:** Kasturba Hospital, Manipal, a teaching hospital of KMC and a constituent unit of MAHE, has successfully carried out the first deceased donor liver transplant in Udupi district, marking a historic milestone in bringing advanced transplant care to the region.

The life-saving procedure was made possible through an extraordinary act of generosity. In the midst of profound personal loss, a bereaved family chose to donate their loved one's organs, offering another patient a renewed chance at life. The hospital expressed deep gratitude to the donor and the family for their courage and compassion. Their selfless decision has brought hope to another household and reflects the true spirit of organ donation.






**KEMMANNU.COM**

**LINK:** https://share.google/bG2Ft79UG8KE1zThU







## Kasturba Hospital, Manipal Performs Udupi District's First Deceased Donor Liver Transplant

*Richard D'Souza*
*Kemmannu News Network, 01-04-2026 16:58:17*

Write Comment | E-Mail To a Friend | Facebook | Twitter | Print

Manipal | 01 April 2026: Kasturba Hospital, Manipal, a teaching hospital of KMC and a constituent unit of MAHE, has successfully performed the first deceased donor liver transplant of the Udupi district, marking a historic milestone in making advanced transplant care available within the region.



**NAMMA UDUPI BULLETIN**

**LINK:** https://nammaudupibulletin.com/suddigalu/pradeshika/reg-news-udupi-7776/




# ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ: ಉಡುಪಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಅಪರೂಪದ ಕಸಿ ಶಸ್ತ್ರಚಿಕಿತ್ಸೆ

By: Udupi Bulletin News Desk | Date: April 1, 2026

**ಮಣಿಪಾಲ, ಏ.1:** ಕೆಎಂಸಿಯ ಬೋಧನಾ ಆಸ್ಪತ್ರೆ ಮತ್ತು ಮಾಹೆಯ ಘಟಕವಾದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲವು ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ. ಇದು ಈ ಪ್ರದೇಶದೊಳಗೆ ಸುಧಾರಿತ ಕಸಿ ಆರೈಕೆಯನ್ನು ಲಭ್ಯವಾಗುವಂತೆ ಮಾಡುವಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಗುರುತಿಸಿದೆ.

ಜೀವ ಉಳಿಸುವ ಈ ಪ್ರಕ್ರಿಯೆಯು ಅಸಾಧಾರಣ ಔದಾರ್ಯದ ಮೂಲಕ ಸಾಧ್ಯವಾಯಿತು. ಆಳವಾದ ವೈಯಕ್ತಿಕ ನಷ್ಟದ ನಡುವೆಯೂ, ದುಃಖಿತ ಕುಟುಂಬವೊಂದು ತಮ್ಮ ಪ್ರೀತಿಪಾತ್ರರ ಅಂಗಗಳನ್ನು ದಾನ ಮಾಡಲು ನಿರ್ಧರಿಸಿತು, ಇದರಿಂದಾಗಿ ಮತ್ತೊಬ್ಬ ರೋಗಿಗೆ ಬದುಕಲು ಹೊಸ ಅವಕಾಶ ದೊರೆಯಿತು. ದಾನಿ ಮತ್ತು ಕುಟುಂಬದ ಧೈರ್ಯ ಮತ್ತು ಸಹಾನುಭೂತಿಗಾಗಿ ಆಸ್ಪತ್ರೆಯು ತನ್ನ ಆಳವಾದ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ. ಅವರ ನಿಸ್ವಾರ್ಥ ನಿರ್ಧಾರವು ಮತ್ತೊಂದು ಕುಟುಂಬಕ್ಕೆ ಭರವಸೆಯನ್ನು ತಂದಿದೆ ಮತ್ತು ಅಂಗಾಂಗ ದಾನದ ನಿಜವಾದ ಮನೋಭಾವವನ್ನು ಪ್ರತಿಬಿಂಬಿಸುತ್ತದೆ.

ಇನ್ನಷ್ಟು ಅನ್ವೇಷಿಸಿ
Medical Literature & Reso...
Health Conditions
Medical Facilities & Services

**UDUPI TIMES**

**LINK:** https://udupitimes.com/udupi-times-22306/

Coastal News

# ಕೆಎಂಸಿಯಲ್ಲಿ ಉಡುಪಿ ಜಿಲ್ಲೆಯ ಮೊದಲ ಮೃತ ದಾನಿ ಯಕೃತ್ತು ಕಸಿ ಶಸ್ತ್ರಚಿಕಿತ್ಸೆ

April 1, 2026




ಮಣಿಪಾಲ, ಎ.1: ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಪರಿಣಿತ ವೈದ್ಯರು ಉಡುಪಿ ಜಿಲ್ಲೆಯಲ್ಲಿ ಇದೇ ಮೊದಲ ಬಾರಿ ಮೃತ ದಾನಿಯೊಬ್ಬರ ಯಕೃತ್‌ನ(ಲೀವರ್) ಕಸಿ ಶಸ್ತ್ರಚಿಕಿತ್ಸೆಯನ್ನು ರೋಗಿ ಯೊಬ್ಬರ ಮೇಲೆ ಯಶಸ್ವಿಯಾಗಿ ನಡೆಸಿದ್ದಾರೆ. ಯಕೃತ್ ಕಸಿ ಮಾಡಿಸಿಕೊಂಡ 56ರ ಹರೆಯದ ರೋಗಿ ಈಗ ಆರೋಗ್ಯವಂತರಾಗಿದ್ದಾರೆ ಎಂದು ಕೆಎಂಸಿ ಆಸ್ಪತ್ರೆಯ ಡಾ.ರಾಮದಾಸ ಎಂ.ಪೈ ಬ್ಲಾಕ್‌ನಲ್ಲಿ ಕರೆದ ಸುದ್ದಿ ಗೋಷ್ಠಿಯಲ್ಲಿ ಮಾಹೆಯ ಬೋಧನಾ ಆಸ್ಪತ್ರೆಯ ಸಿಒಒ ಡಾ.ಸುಧಾಕರ ಕಾಂತಿಪುಡಿ ತಿಳಿಸಿದ್ದಾರೆ.

ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಮೆದುಳು ನಿಷ್ಕ್ರಿಯಗೊಂಡ 42ಹರೆಯದವರ ಲೀವರ್‌ನ್ನು ದಾನ ಮಾಡಲು ದುಃಖಿತ ಕುಟುಂಬ ನಿರ್ಧರಿಸಿದ್ದು, ಇದರಿಂದಾಗಿ ಯಕೃತ್‌ನ ತೀವ್ರ ತೊಂದರೆಯಿಂದ ಬಳಲುತಿದ್ದ ಕೋಟೇಶ್ವರ ಮೂಲದ ರೋಗಿ ಅದನ್ನು ಪಡೆದು ಆರೋಗ್ಯವನ್ನು ಮರಳಿ ಪಡೆಯಲು ಸಾಧ್ಯವಾಯಿತು ಎಂದವರು ಹೇಳಿದರು.

ದೀರ್ಘಕಾಲದ ಯಕೃತ್ (ಲೀವರ್) ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಯನ್ನು ಮೃತ ದಾನಿಯ ಕಸಿ ಕಾರ್ಯಕ್ರಮದಡಿಯಲ್ಲಿ ವಿವರವಾದ ಬಹು ಆಯಾಮ ಮೌಲ್ಯಮಾಪನಕ್ಕೆ ಒಳಪಡಿಸಿ, ಎಚ್ಚರಿಕೆಯ ಯೋಜನೆ ಮತ್ತು ಅಂಗಾಂಗ ಹಂಚಿಕೆ ಮಾರ್ಗಸೂಚಿಗಳಂತೆ ಯಕೃತ್ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಯಿತು ಎಂದು ಡಾ.ಸುಧಾಕರ್ ವಿವರಿಸಿದರು.

**KARAVALI NEWS**

**LINK:** https://karavalinews.com/the-first-deceased-donor-liver-transplant-surgery-in-the-district-was-successful-at-kasturba-hospital-manipal/

ಆರೋಗ್ಯ ಉಡುಪಿ

ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಲ್ಲಿ ಜಿಲ್ಲೆಯಲ್ಲೇ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ

APR 1, 2026




hare this news

ಕಾರ್ಕಳ, ಏ.01 : ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಉಡುಪಿ ಜಿಲ್ಲೆಯಲ್ಲಿಯೇ ಮೊದಲ ಮೃತ ದಾನಿ ಯಕೃತ್ತು (ಲಿವರ್) ಕಸಿ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿ ನಡೆದಿದೆ.ಈ ಮೂಲಕ ಯಕೃತ್ತು ಕಸಿ ಶಸ್ತ್ರ ಚಿಕಿತ್ಸೆಯಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ.

ಮೃತ ವ್ಯಕ್ತಿಯ ಕುಟುಂಬ ಅಂಗಾಂಗಗಳನ್ನು ದಾನ ಮಾಡಲು ನಿರ್ಧರಿಸಿದ್ದರಿಂದ ಒಬ್ಬ ಅನಾರೋಗ್ಯ ವ್ಯಕ್ತಿಗೆ ಜೀವದಾನ ನೀಡಿದಂತಾಗಿದೆ.ದೀರ್ಘಕಾಲದ ಯಕೃತ್ (ಲಿವರ್) ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಯನ್ನು ಮೃತ ದಾನಿಯ ಯಕೃತ್ತು ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಸಲಾಯಿತು.

**FACEBOOK**

## Dhrishya Media's post

Dhrishya Media
5d ·

ಉಡುಪಿ ಜಿಲ್ಲೆಯಲ್ಲಿ ಮೊದಲ ಮೃತ ದಾನಿ ಲಿವರ್ ಕಸಿ: ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಐತಿಹಾಸಿಕ ಸಾಧನೆ..!

ಮಣಿಪಾಲ, ಏಪ್ರಿಲ್ 1: ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಮೃತ ದಾನಿಯಿಂದ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದ್ದು, ಕರಾವಳಿ ಕರ್ನಾಟಕದಲ್ಲಿ ಸುಧಾರಿತ ಆರೋಗ್ಯ ಸೇವೆಗೆ ಹೊಸ ಮೈಲಿಗಲ್ಲು ಸ್ಥಾಪಿಸಲಾಗಿದೆ.

ಈ ಜೀವ ಉಳಿಸುವ ಶಸ್ತ್ರಚಿಕಿತ್ಸೆ ಒಂದು ಕುಟುಂಬದ ಮಹಾನ್ ನಿರ್ಧಾರದಿಂದ ಸಾಧ್ಯವಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ದುಃಖದ ನಡುವೆಯೂ, ಆ ಕುಟುಂಬವು ಅಂಗಾಂಗ ದಾನಕ್ಕೆ ಮುಂದಾಗಿ ಮತ್ತೊಬ್ಬ ರೋಗಿಗೆ ಬದುಕಿನ ಹೊಸ ಆಶೆಯನ್ನು ನೀಡಿದೆ.

ಆಸ್ಪತ್ರೆ ವತಿಯಿಂದ ದಾನಿ ಕುಟುಂಬದ ಈ ಮಾನವೀಯ ಸೇವೆಗೆ ಹೃತ್ಪೂರ್ವಕ ಕೃತಜ್ಞತೆ ವ್ಯಕ್ತಪಡಿಸಲಾಗಿದೆ.

ದೀರ್ಘಕಾಲದ ಯಕೃತ್ ಕಾಯಿಲೆ ಮತ್ತು ಪೋರ್ಟಲ್ ಹೈಪರ್ಟೆನ್ಷನ್‌ನಿಂದ ಬಳಲುತ್ತಿದ್ದ 56 ವರ್ಷದ ರೋಗಿಯನ್ನು ಸಮಗ್ರ ವೈದ್ಯಕೀಯ ಮೌಲ್ಯಮಾಪನದ ನಂತರ ಕಸಿ ಪ್ರಕ್ರಿಯೆಗೆ ಒಳಪಡಿಸಲಾಯಿತು.

ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ರೋಗಿಯನ್ನು ವಿಶೇಷ ಐಸಿಯುನಲ್ಲಿ ತೀವ್ರ ನಿಗಾವಹಿಸಿ ಚಿಕಿತ್ಸೆ ನೀಡಲಾಗಿದ್ದು, ಅವರು ಸ್ಥಿರ ಸ್ಥಿತಿಯಲ್ಲಿ ಬಿಡುಗಡೆಯಾಗಿದ್ದಾರೆ.

ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕರಾದ ಡಾ. ಶಿರನ್ ಶೆಟ್ಟಿ ಅವರು ಪ್ರಾಥಮಿಕ ಮೌಲ್ಯಮಾಪನ ನಡೆಸಿ, ಕಸಿ ಮಾತ್ರವೇ ಉತ್ತಮ ಪರಿಹಾರ ಎಂದು ಗುರುತಿಸಿದರು. ಬಳಿಕ ಪ್ರಕರಣವನ್ನು HPB ಮತ್ತು ಲಿವರ್ ಟ್ರಾನ್ಸ್‌ಪ್ಲಾಂಟ್ ತಜ್ಞರಾದ ಡಾ. ಜಯಂತ್ ರೆಡ್ಡಿ ಅವರ ನೇತೃತ್ವದ ತಂಡಕ್ಕೆ ವರ್ಗಾಯಿಸಲಾಯಿತು.

ಈ ಶಸ್ತ್ರಚಿಕಿತ್ಸೆಯಲ್ಲಿ ಡಾ. ಭರತ್ ಕುಮಾರ್ ಭಟ್ ಸೇರಿದಂತೆ ಬಹುಶಿಸ್ತೀಯ ವೈದ್ಯಕೀಯ ತಂಡ ಸಮನ್ವಯದಿಂದ ಕಾರ್ಯನಿರ್ವಹಿಸಿದ್ದು, ಸಮಯೋಚಿತ ಹಸ್ತಕ್ಷೇಪದಿಂದ ಯಶಸ್ಸು ಸಾಧಿಸಲಾಗಿದೆ.

ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗಳು ಸಹಯೋಗದೊಂದಿಗೆ ನಡೆಯುತ್ತಿರುವ ಈ ಲಿವರ್ ಕಸಿ ಕಾರ್ಯಕ್ರಮವು ಉಡುಪಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ರೋಗಿಗಳಿಗೆ ತಮ್ಮ ಪ್ರದೇಶದಲ್ಲಿಯೇ ಉನ್ನತ ಮಟ್ಟದ ಚಿಕಿತ್ಸೆ ಪಡೆಯುವ ಅವಕಾಶವನ್ನು ಕಲ್ಪಿಸುತ್ತಿದೆ.

“ಈ ಸಾಧನೆಯೊಂದಿಗೆ ಉಡುಪಿ ಜಿಲ್ಲೆಯಲ್ಲಿ ಸುಧಾರಿತ ಲಿವರ್ ಕಸಿ ಚಿಕಿತ್ಸೆಯನ್ನು ಸ್ಥಳೀಯವಾಗಿ

**INSTAGRAM**

**LINK**: https://www.instagram.com/reel/DWlvdqTDw9r/?igsh=MXQwZnk4YnU5MHVmZg==

